

# ಶರ್ಮಿಳಾವಲೋಕನ

‘ಸಜನಿ’ ಚಿತ್ರದ ಮೂಲಕ ಹದಿನಾರರ ಹರೆಯದಲ್ಲೇ ಕನ್ನಡ ಸಿನಿಮಾರಂಗಕ್ಕೆ ಕಾಲಿಟ್ಟಿದ್ದ ನಟಿ ಶರ್ಮಿಳಾ ಮಾಂಡ್ರೆ, ಹಲವು ಸಿನಿಮಾಗಳ ಮೂಲಕ ಕನ್ನಡಿಗರಿಗೆ ಚಿರಪರಿಚಿತರು. ಸಿನಿಮಾರಂಗದಲ್ಲಿ ಸಕ್ರಿಯರಾಗಿರುವ, ಸಿನಿಮಾ ನಿರ್ಮಾಣದಲ್ಲಿಯೂ ತೊಡಗಿಕೊಂಡಿರುವ ಅವರು, ಸಿನಿಮಾರಂಗದಲ್ಲಿನ ತಮ್ಮ ಮೊದಲ ಹೆಜ್ಜೆಗಳನ್ನು ಮೆಲುಕು ಹಾಕಿದ್ದಾರೆ.

ಕನ್ನಡ ಸಿನಿಮಾರಂಗಕ್ಕೆ ಅವರು ಕಾಲಿಟ್ಟು ಹದಿನೆಂಟು ವರ್ಷಗಳನ್ನು ಪೂರೈಸಿದ್ದು, ಸಿನಿಮಾರಂಗದ ಈಗಿನ ಸ್ಥಿತಿಗತಿಗಳೊಂದಿಗೆ ಆ ದಿನಗಳನ್ನು ತಾಳೆ ಹಾಕಿದ್ದಾರೆ.

“ನನಗೆ 16 ವರ್ಷವಿದ್ದಾಗ ‘ಸಜನಿ’ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗಕ್ಕೆ ಪರಿಚಿತಳಾದೆ. ಆಗಿನಿಂದಲೂ ನನ್ನ ಕರಿಯರ್ ಅನ್ನು ಲೆಕ್ಕಾಚಾರಕ್ಕೆ ಒಳಗಾಗಿಸಲಿಲ್ಲ. ನಾನು ಇಷ್ಟಪಟ್ಟು ಮಾಡುವಂಥ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುವುದಷ್ಟೇ ನನ್ನ ಉದ್ದೇಶವಾಗಿತ್ತು. ಪಾತ್ರಗಳಿಗೆ ಲಾಬಿ ಮಾಡದೆ ಇರುವುದೇ ನಾನು ಸಿನಿಮಾರಂಗದಲ್ಲಿ ಉಳಿದುಕೊಳ್ಳಲು ಕಾರಣವಿರಬಹುದು. ಹಾಗೂ ಆ ಬಗ್ಗೆ ನನಗೆ ಖುಷಿಯಿದೆ” ಎಂದಿದ್ದಾರೆ.

ಈಗಿನ ಸಿನಿಮಾರಂಗದ ಸ್ಥಿತಿಯ ಬಗ್ಗೆ ಮಾತನಾಡುತ್ತಾ, ‘ಈಗ ಪ್ಯಾಕ್ಡ್ ಆಡಿಯನ್ಸ್ ಅಪರೂಪವಾಗಿದ್ದಾರೆ. ಜೊತೆಗೆ 2000ನೇ ಇಸವಿಯಿಂದೀಚೆಗೆ ಬಂದು, ಇನ್ನೂ ಚಿತ್ರರಂಗದಲ್ಲಿ ಸಕ್ರಿಯರಾಗಿರುವ ನಟಿಯರಲ್ಲಿ ನಾನೂ ಒಬ್ಬಳು’ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಸಿನಿಮಾ ನಿರ್ಮಾಣದಲ್ಲಿ ತಮ್ಮ ಕುಟುಂಬದ ನಂಟಿನ ಕುರಿತು ಮಾತು ಹಂಚಿಕೊಂಡಿರುವ ಅವರು, ‘ಫಿಲ್ಮ್ ಮೇಕಿಂಗ್‌ನಲ್ಲಿ ನನ್ನ ಕುಟುಂಬ ತೊಡಗಿಕೊಂಡಿತ್ತು. ಇದು ಸಿನಿಮಾ ಬಗ್ಗೆ ನನಗೆ ಸಂಪೂರ್ಣ ಹೊಸದೇ ದೃಷ್ಟಿಕೋನವನ್ನು ಒದಗಿಸಿತ್ತು. ಸಾಮಾನ್ಯವಾಗಿ ಜನರು ನಟರನ್ನು ಹೊಗಳುತ್ತಾರೆ ಹಾಗೂ ಮೆಚ್ಚುತ್ತಾರೆ. ಆದರೆ ನಿರ್ಮಾಪಕರೇ ನಿಜವಾಗಿ ಇದರಲ್ಲಿ ಶ್ಲಾಘನಾರ್ಹರು. ಕಾಸ್ಟ್, ಪ್ರೊಮೋಷನ್, ಒಟಿಟಿ ರಿಲೀಸ್ ಎಲ್ಲವೂ ಅವರದ್ದೇ ಜವಾಬ್ದಾರಿ. ಎರಡು ಸಿನಿಮಾಗಳಿಗೆ ನಿರ್ಮಾಪಕಳಾಗಿರುವ ನಾನು ಇದನ್ನು ಬಲ್ಲೆ’ ಎಂದು ತಮ್ಮ ಅನುಭವಗಳನ್ನು ತೆರೆದಿಟ್ಟಿದ್ದಾರೆ.

ಸಿನಿಮಾ ಕಥೆಗಳಲ್ಲಿ ಆಗಿರುವ ಬದಲಾವಣೆಗಳ ಕುರಿತು ಚರ್ಚಿಸಿರುವ ಅವರು, ‘ಆಗ ಬರೀ ಲವ್ ಸ್ಟೋರಿ, ಆ್ಯಕ್ಷನ್ ಹಾಗೂ ಫ್ಯಾಮಿಲಿ ಎಂಟರ್‌ಟೇನ್ಮೆಂಟ್ ಸಿನಿಮಾಗಳಿದ್ದವು. ನಾನು ಸಿನಿಮಾರಂಗಕ್ಕೆ ಬಂದಾಗ ರೀಮೇಕ್ ಸಿನಿಮಾಗಳು ಟ್ರೆಂಡ್‌ನಲ್ಲಿದ್ದವು. ಆಗ ನಿರ್ದೇಶಕರು ರೊಮ್ಯಾಂಟಿಕ್, ಆ್ಯಕ್ಷನ್ ಆಧರಿತ ಹಾಗೂ ಫ್ಯಾಮಿಲಿ ಡ್ರಾಮಾಗಳ ಕಥೆಗಳನ್ನು ಆರಿಸಿಕೊಳ್ಳುತ್ತಿದ್ದರು. ಈಗ ಆ ಫಾರ್ಮುಲಾ ಉಳಿದಿಲ್ಲ. ಒಟಿಟಿಯೊಂದಿಗೆ ಕ್ರಿಯಾತ್ಮಕ ವಿಷಯಗಳು, ಕಥೆಗಳು ಶಿಫ್ಟ್ ಆಗುತ್ತಿವೆ. ಜನರ ಅಟೆನ್ಷನ್ ಅವಧಿ 20 ಸೆಕೆಂಡ್‌ಗಳಿಗೆ ಇಳಿದಿರುವ ಕಾಲದಲ್ಲಿದ್ದೇವೆ. ಅವರಿಗೆ ಇಷ್ಟವಾಗಲಿಲ್ಲ ಎಂದರೆ ಸ್ವೈಪ್ ಮಾಡಿಬಿಡುತ್ತಾರೆ. ಜನರಿಗೆ ಸ್ವೈಪ್ ಮಾಡಲು ಅವಕಾಶ ನೀಡದಂಥದ್ದನ್ನು ನೀಡಬೇಕಿದೆ’ ಎಂದು ಸಿನಿಮಾರಂಗದಲ್ಲಿನ ಸವಾಲುಗಳ ಬಗ್ಗೆಯೂ ಮಾತನಾಡಿದ್ದಾರೆ.

# ಮಕ್ಕಳಿಗಾಗಿ ಶಿವಣ್ಣ-ಶ್ರೀನಿ ಸಿನಿಮಾ

ಪ್ರತಿ ಸಿನಿಮಾದಲ್ಲಿಯೂ ವಿಭಿನ್ನ ಪಾತ್ರಗಳ ಮೂಲಕ ಅಭಿಮಾನಿಗಳಿಗೆ ಅಚ್ಚರಿ ನೀಡುತ್ತಿರುವ ಶಿವಣ್ಣ ಈಗ ಮಾಸ್‌ನಿಂದ ಮೇಷ್ಟರಾಗಿ ಬದಲಾಗುತ್ತಿದ್ದಾರೆ.

ಬಹುನಿರೀಕ್ಷಿತ ‘ಭೈರತಿ ರಣಗಲ್’ ಸಿನಿಮಾ ಬಿಡುಗಡೆಯಾಗಿದ್ದು, ಸಾಲು ಸಾಲು ಸಿನಿಮಾಗಳಲ್ಲಿ ಬಿಜಿಯಾಗಿರುವ ಅವರು, ಮಕ್ಕಳಿಗಾಗಿ ಹೊಸ ಸಿನಿಮಾ ಘೋಷಿಸಿದ್ದಾರೆ. ‘ಮಕ್ಕಳ ದಿನಾಚರಣೆ’ ದಿನದಂದು ‘A for ಆನಂದ್’ ಮಕ್ಕಳ ಸಿನಿಮಾವನ್ನು ಘೋಷಣೆ ಮಾಡಿದ್ದಾರೆ. ಗೀತಾ ಪಿಕ್ಚರ್ಸ್‌ನ ಮೂರನೇ ಸಿನಿಮಾ ಇದಾಗಿದ್ದು, ಶ್ರೀನಿ ನಿರ್ದೇಶನದಲ್ಲಿ ಚಿತ್ರ ಮೂಡಿಬರುತ್ತಿದೆ.

‘ಸುಂದರ ಕಾಂಡ’ ಸಿನಿಮಾದಲ್ಲಿ ಉಪನ್ಯಾಸಕನ ಪಾತ್ರದಲ್ಲಿ ಅಭಿನಯಿಸಿದ್ದ ಶಿವರಾಜ್ ಕುಮಾರ್, ಬಹಳ ವರ್ಷದ ಬಳಿಕ ಈ ರೀತಿಯ ಪಾತ್ರ ಒಪ್ಪಿಕೊಂಡಿದ್ದಾರೆ. ಪಾತ್ರ ಭಿನ್ನವಾಗಿದ್ದು, ಈ ಸಿನಿಮಾದಲ್ಲಿ ಒಂದೊಳ್ಳೆಯ ಸಂದೇಶ ಇರಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ.

‘A for ಆನಂದ್’ ಸಿನಿಮಾಗೆ ಮಹೇನ್ ಸಿಂಹ ಕ್ಯಾಮೆರಾ, ದೀಪು ಎಸ್. ಕುಮಾರ್ ಸಂಕಲನ, ಪ್ರಸನ್ನ ವಿ.ಎಂ. ಸಂಭಾಷಣೆ ಇದೆ. ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ತಂಡ ಶೂಟಿಂಗ್ ಆರಂಭಿಸಲಿದೆ.

